ಅಸಲ ದಾವಾ ನಂ.**358/2011**
ಡಿಡಬ್ಲ್ಯೂ-**02**

ದಿನಾಂಕ**: 11-08-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: 7 ಮತ್ತು 8 ನೇ ಪ್ರತಿವಾದಿ ಪರ**

**ಶ್ರೀ.ಎಮ್.ಆರ್.ಐ. ವಕೀಲರಿಂದ**

1) ಯಾಸೀನ್ ಖಾನ್ ಮುಲ್ಲಾ ಇವರು ನಿಮಗೆ ವಿಲ್ ಮಾಡಿದ ಆಧಾರದ ಮೇಲೆ ಮಾಲ್ಕಿ ಹಕ್ಕು ಕೇಳುತ್ತಿದ್ದೀರಿ ಎಂದರೆ ಸಾಕ್ಷಿಯು ವಿಲ್ ಮತ್ತು ಮ್ಯೂಟೇಷನ್ ಎಂಟ್ರಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಯಾಸೀನ್ ಖಾನ್ ಮುಲ್ಲಾ ಇವರು ವಿಲ್ ಮೂಲಕ ಎಷ್ಟು ಆಸ್ತಿಗಳನ್ನು ಮಾಡಿದ್ದಾರೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನಾಲ್ಕು ಜಮೀನು ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ-78 ವಿಲ್ ಡೀಡ್ ಅನ್ನು ಓದಿ ಹೇಳಲಾಗಿ, ಅದರಲ್ಲಿ ನಿಮಗೆ ಸರ್ವೆ ನಂ.175 ಮತ್ತು 188 ಮಾತ್ರ ವಿಲ್ ಮಾಡಿದ್ದಾರೆ ಎಂದರೆ ಸಾಕ್ಷಿಯು ನಿಡಿ-78 ಅನ್ನು ಓದಿ ಇರಬಹುದು ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ತಪ್ಪು ಬರೆದಿರಬಹುದು ಎಂದು ಉತ್ತರಿಸುತ್ತಾರೆ. ಸಾಕ್ಷಿಯು ನಿಡಿ-78 ವಿಲ್ ಡೀಡ್ ನಲ್ಲಿ ಎರಡು ಆಸ್ತಿಗಳ ಬಗ್ಗೆ ಬರೆದಿದ್ದಾರೆ ಎಂದು ಉತ್ತರಿಸಿ, ಮುಂದುವರೆದು ತಪ್ಪಾಗಿ ಬರೆದಿರಬಹುದು ಎಂದು ಉತ್ತರಿಸುತ್ತಾರೆ.

2) ಮೃತ್ಯು ಪತ್ರದ ಪ್ರಕಾರ ನಿಮಗೆ ಎರಡು ಜಮೀನು ಕೊಟ್ಟಿದ್ದು, ಡ.ನಂ.1477 ರಲ್ಲಿ ನಾಲ್ಕು ಜಮೀನು ಬರೆದಿದ್ದಾರೆ ಎಂದರೆ ಮೃತ್ಯು

ಪತ್ರ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. ಡ.ನಂ.1477 ಮೃತ್ಯು ಪತ್ರದ ಪ್ರಕಾರ ಆಗಿಲ್ಲ ಎಂದರೆ ಸಾಕ್ಷಿಯು ಮೃತ್ಯು ಪತ್ರದಲ್ಲಿ ತಪ್ಪಾಗಿ ಬರೆದಿರಬಹುದು ಎಂದು ಉತ್ತರಿಸುತ್ತಾರೆ. ಡ.ನಂ.1477 ರದ್ದಾಗಿದೆ, ಮಂಜೂರು ಆಗಿಲ್ಲ ಎಂದರೆ ಸಾಕ್ಷಿಯು ಮಂಜೂರು ಆಗಿದೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ-15 ಡ.ನಂ.1477 ಅನ್ನು ತೋರಿಸಲಾಗಿ ಅದನ್ನು ಓದಿ ಸಾಕ್ಷಿಯು ಕೆಳಗಡೆ ತಪ್ಪು ಬರೆದಿದ್ದಾರೆ, ಮೇಲೆ ಸರಿ ಬರೆದಿದ್ದಾರೆ ಎಂದು ಉತ್ತರಿಸುತ್ತಾರೆ. 1957 ರಲ್ಲಿ ಆದಂತಹ ಡ. ಪ್ರಕಾರ ನ್ಯಾಯಾಲಯದಿಂದ ಸಕ್ಸೇಷನ್ ಸರ್ಟಿಫಿಕೇಟ್ ಪಡೆದಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ವಿಲ್ ಪ್ರಕಾರ ಯಾಸೀನ್ ಖಾನ್ ಇವರು ತನ್ನ ಎಲ್ಲಾ ಆಸ್ತಿಗಳನ್ನು ನಿಮಗೆ ಕೊಟ್ಟಿದ್ದಾರೆ ಎಂದು ಹೇಳುತ್ತೀರಾ ಎಂದರೆ ಸಾಕ್ಷಿಯು 1977 ರಲ್ಲಿ ಡ. ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು 1978 ರಲ್ಲಿ ಒಂದು ವರದಿಯನ್ನು ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಡ.ನಂ.1477 ರದ್ದು ಆದ ನಂತರ 2002 ರವರೆಗೆ ನಿಮ್ಮ ಹೆಸರು ಎಂಟ್ರಿ ಆಗಿಲ್ಲ ಎಂದರೆ ಸಾಕ್ಷಿಯು 1977 ರಲ್ಲಿ ಡ.ನಂಬರ್, 2300 ಆಗಿತ್ತು ಎಂದು ಉತ್ತರಿಸುತ್ತಾರೆ. ದಿನಾಂಕಃ 28-05-2002 ರಲ್ಲಿ ಡ.ನಂ.5737 ಆಗಿತ್ತು ಎಂದರೆ ಸಾಕ್ಷಿಯು ಆರ್.ಟಿ.ಎಸ್. ಪ್ರಕಾರ ಅವರ ಹೆಸರು ಕಡಿಮೆ ಆಗಿದೆ ಎಂದು

ಉತ್ತರಿಸುತ್ತಾರೆ. ಸದರಿ ಡ. ದ ಮೇಲೆ ನಿಮ್ಮ ಅಣ್ಣ ತಮ್ಮಂದಿರು ತಕರಾರು ಮಾಡಿದ್ದರಿಂದ, ಆರ್.ಟಿ.ಎಸ್. ನಂ.ಸಿ.ಆರ್/07/2002-03- ಎಂದು ಆಗಿತ್ತು ಎಂದರೆ ಸರಿ. ಅದರಲ್ಲಿ ತಹಶೀಲ್ದಾರ ಇವರು ನಿಮ್ಮ ಹೆಸರನ್ನು ಮಂಜೂರು ಮಾಡಿ ಡ.ನಂ.5737 ಅನ್ನು ಮಂಜೂರು ಮಾಡಿದ್ದರು ಎಂದರೆ ಸಾಕ್ಷಿಯು ಆರ್.ಟಿ.ಎಸ್. ನಲ್ಲಿ 07 ಜನರನ್ನು ಪಾರ್ಟಿಯನ್ನಾಗಿ ಮಾಡಿದ್ದರು, ಅವರು ಸ್ವ-ಸಂತೋಷದಿಂದ ಬಿಟ್ಟುಕೊಟ್ಟಿದ್ದರು ಎಂದು ಉತ್ತರಿಸುತ್ತಾರೆ. ಆರ್.ಟಿ.ಎಸ್. ಅಪೀಲ್ ನಂ.94/2003-04 ಅನ್ನು ಅಪೀಲ್ ಮಾಡಿದ್ದರು ಎಂದರೆ ಸಾಕ್ಷಿಯು ಸುಳ್ಳು ಹೆಸರಿಗೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಅದರಲ್ಲಿಯೂ ಸಹ ನಿಮ್ಮ ಅಣ್ಣ ತಮ್ಮಂದಿರ ಪರ ಆದೇಶವಾಯಿತು ಎಂದರೆ ಸಾಕ್ಷಿಯು ಸಿವಿಲ್ ನ್ಯಾಯಾಲಯಕ್ಕೆ ಹೋಗಬೇಕೆಂದು ಆದೇಶ ಆಗಿತ್ತು ಎಂದು ಉತ್ತರಿಸುತ್ತಾರೆ. ಎ.ಸಿ. ರವರ ಆದೇಶದ ವಿರುದ್ದ ನಿಮ್ಮ ಅಣ್ಣ ತಮ್ಮಂದಿರು ಡಿ.ಸಿ. ನ್ಯಾಯಾಲಯದಲ್ಲಿ ರಿವಿಜನ್ ಅಪೀಲ್ ನಂ.1/2008-09 ಸಲ್ಲಿಸಿದ್ದರು ಎಂದರೆ ಸಾಕ್ಷಿಯು ತಪ್ಪು ಹೆಸರಿನಿಂದ ರಿವಿಜನ್ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ರಿವಿಜನ್ ನಲ್ಲಿ ಡ.ನಂ.5737 ರದ್ದು ಆಯಿತು ಎಂದರೆ ಸಾಕ್ಷಿಯು ರದ್ದು ಆಗಿಲ್ಲ ಎಂದು ಉತ್ತರಿಸುತ್ತಾರೆ.

ಅಸಲ ದಾವಾ ನಂ.**358/2011**
ಡಿಡಬ್ಲೂ**-02**

**7 ಮತ್ತು 8 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.